**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 18/2016**

| | | |
|---|---|---|
| ಹೆಸರು | ಸೋಮಣ್ಣ | ಸಿ.ಡಬ್ಲ್ಯೂ - **2** |
| ತಂದೆಯ ಹೆಸರು | ಬಸವಯ್ಯ | ಪಿ.ಡಬ್ಲ್ಯೂ - **1** |
| ವಯಸ್ಸು | 47 ವರ್ಷ | |
| ಉದ್ಯೋಗ | ವ್ಯಾಪಾರ | |
| ವಾಸ ಸ್ಥಳ | ಬೆಂಗಳೂರು | |

ಸಾಕ್ಷಿಗೆ ದಿನಾಂಕಃ 19.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ಚಾಸಾ 1 ರವರು ನನ್ನ ತಂದೆಯಾಗಿದ್ದು, ಅವರು ಮೃತರಾಗಿರುತ್ತಾರೆ. ನನಗೆ ಚಾಸಾ 3, 4 ಮತ್ತು 14 ರವರ ಪರಿಚಯವಿದೆ. ನನಗೆ ಚಾಸಾ 5 ರಿಂದ 13, 15 ಮತ್ತು 16 ರವರ ಪರಿಚಯವಿಲ್ಲ. ಆರೋಪಿತರ ಪರಿಚಯವಿದೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿರುವುದಿಲ್ಲ. ಆರೋಪಿತರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈಗ ನೋಡುತ್ತಿರುವ 02 ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳು ಮಹಜರ್‌ಗಳಾಗಿದ್ದು, ಅವುಗಳನ್ನು ನಿಪಿ 1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 1 ಎ ಮತ್ತು 2 ಎ ಎಂದು ಗುರುತಿಸಲಾಯಿತು. ನಿಪಿ 1 ಮತ್ತು 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ

ದಿ: 25.02.1993 ರಂದು ನನ್ನ ತಂದೆಯು ಸರ್ವೆ ನಂ. 23/2 ರಲ್ಲಿ 2 ಎಕರೆ 15 ಗುಂಟೆ ಜಮೀನನ್ನು ಚಿಕ್ಕಯ್ಯರವರ ಮಗನಾದ ನಾಗರಾಜು ಎಂಬುವವರಿಗೆ 10 ಸಾವಿರ ರೂಪಾಯಿಗಳಿಗೆ ಭೋಗ್ಯ ಮಾಡಿ ಸ್ವಾಧೀನಕ್ಕೆ ಬಿಟ್ಟುಕೊಟ್ಟಿದ್ದು, ನಂತರ ದಿ: 17.11.1993 ರಂದು ಚಾಸಾ 1 ರವರಿಂದ 1 ನೇ ಆರೋಪಿಗೆ ಸದರಿ ಸ್ವತ್ತು ಕ್ರಯವಾಗಿರುತ್ತದೆ. ಆದರೆ ಆರೋಪಿ 1 ರಿಂದ 3 ಮತ್ತು 6 ರವರು ಚಾಸಾ 1 ರವರಿಗೆ ಸೇರಿದ ಸರ್ವೆ ನಂ. 23/2 ರಲ್ಲಿ 2 ಎಕರೆ 15 ಗುಂಟೆ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಅವರ ಗಮನಕ್ಕೆ ಬಾರದಂತೆ ಸದರಿಯವರ ಹೆಸರಿನಲ್ಲಿ ದಾಖಲಾತಿ ಇದ್ದಿದ್ದರಿಂದ ದಿ: 21.06.2010 ರಂದು ಚಾಸಾ 1 ರವರ ಬದಲಾಗಿ 2 ನೇ ಆರೋಪಿಯನ್ನು ನೊಂದಣಿ

ಕಛೇರಿಯಲ್ಲಿ ತೋರಿಸಿ, ಚಾಸಾ 1 ರವರಿಗೆ ಸೇರಿದ ಸರ್ವೆ ನಂ. 23/2 ರ 2 ಎಕರೆ 15 ಗುಂಟೆ ಜಮೀನನ್ನು 1 ರಿಂದ 3 ಮತ್ತು 6 ನೇ ಆರೋಪಿತರು ಸೇರಿ ಮೋಸದಿಂದ ಮೃತ ನಾಗರಾಜು ಭೋಗ್ಯ ತೀರುವಳಿ ಮಾಡಿದಂತೆ ನೊಂದಣಿ ಮಾಡಿಸಿರುತ್ತಾರೆ ಮತ್ತು ಮೃತ ಚಾಸಾ 1 ರವರ ಸಹಿಯನ್ನು ಫೋರ್ಜರಿ ಮಾಡಿರುತ್ತಾರೆ ಎಂದು ಈಗ ಓದಿ ಹೇಳಲಾದಂತೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

2. ದಿ: 09.01.2013 ರಂದು ಪೊಲೀಸರು ವಾಸುವಳ್ಳಿ ಗ್ರಾಮದ ಸರ್ವೆ ನಂ. 23/2 ರ ಜಮೀನಿನ ಬಳಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು 6 ರವರ ಸಮಕ್ಷಮ ನಿಪಿ 1 ರಂತೆ ಸಂಜೆ 4 ರಿಂದ 4-30 ರ ಅವಧಿಯಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ದಿನಾಂಕದಂದು ಮಳವಳ್ಳಿ ಉಪನೊಂದಾಣಾಧಿಕಾರಿಗಳ ಕಛೇರಿಯಲ್ಲಿ ನನ್ನ ಮತ್ತು ಚಾಸಾ 3 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 11-45 ರ ಸಮಯದಲ್ಲಿ ನಿಪಿ 2 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃಆರೋಪಿ ಪರ: ವಕೀಲರಿಂದ</u>

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.